# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :1521
ಸದಸ್ಯರ ಹೆಸರು :ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :19.12.2025
ಉತ್ತರಿಸುವ ಸಚಿವರು :ಮಾನ್ಯ ಕಂದಾಯ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಿಂದಾಗಿ ಹಾನಿಗೀಡಾಗಿರುವ ಕಾಫಿ ಬೆಳೆಗಳಿಗೆ ಸರ್ಕಾರ ನೀಡಿರುವ ಬೆಳೆ ಪರಿಹಾರ ಎಷ್ಟು; (ವರ್ಷವಾರು ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು) | 2023-24 ನೇ ಸಾಲಿನ ನೈಋತ್ಯ ಮುಂಗಾರು ಅವಧಿಯಲ್ಲಿ ರಾಜ್ಯದಲ್ಲಿ ಮಳೆಯ ಕೊರತೆ ಉಂಟಾದ ಪರಿಣಾಮವಾಗಿ ತೀವ್ರ ಬರ ಪರಿಸ್ಥಿತಿ ಎದುರಿಸಲಾಯಿತು. ಆದ್ದರಿಂದ ಪ್ರವಾಹಗಳು ಅಥವಾ ಭಾರೀ ಮಳೆಯ ಕಾರಣದಿಂದ ಕಾಫಿ ಬೆಳೆ ನಷ್ಟ ವರದಿಯ ಪ್ರಶ್ನೆ ಉದ್ಭವಿಸುವುದಿಲ್ಲ.<br><br>2024-25 ನೇ ಸಾಲಿನ ಅವಧಿಯಲ್ಲಿ ಮಳೆಯು ಬಹುತೇಕ ಸಾಮಾನ್ಯವಾಗಿದ್ದು, ನೈಋತ್ಯ ಮುಂಗಾರು ಅವಧಿಯಲ್ಲಿ ಕೆಲವೊಮ್ಮೆ ಭಾರೀ ಮಳೆಯ ಅವಧಿಗಳು ಕಂಡುಬಂದವು. ಆದರೆ ಕೊಡಗು ಜಿಲ್ಲೆಯಲ್ಲಿ ಪ್ರವಾಹಗಳು ಅಥವಾ ಭಾರೀ ಮಳೆಯ ಕಾರಣದಿಂದ ಯಾವುದೇ ಕಾಫಿ ಬೆಳೆ ನಷ್ಟ ವರದಿಯಾಗಿಲ್ಲ.<br><br>2025-26 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ನಡೆಸಿರುವ ಜಂಟಿ ಸಮೀಕ್ಷೆಯ ಪ್ರಕಾರ ಕಾಫಿ ಬೆಳೆ ಹಾನಿಯ ವರದಿಯಾಗಿರುವುದಿಲ್ಲ. ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಆ) | ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಮಳೆಯಿಂದಾಗಿ ನಷ್ಟವಾದ ಕಾಫಿ ಬೆಳೆಯ ಹಾನಿಯ ಪ್ರಮಾಣ ಎಷ್ಟು; ಬೆಳೆಹಾನಿ ಕುರಿತು ಜಂಟಿ ಸಮೀಕ್ಷೆ ನಡೆಸಲಾಗಿದೆಯೇ; (ಯಾವ ಯಾವ ಇಲಾಖೆ ಜತೆಗೂಡಿ ಸಮೀಕ್ಷೆ ನಡೆಸಿದೆ) ಯಾವ ಆಧಾರದ ಮೇಲೆ ಸಮೀಕ್ಷೆಯನ್ನು ನಡೆಸಲಾಗಿದೆ ಮತ್ತು ನಷ್ಟವಾದ ಬೆಳೆ ಹಾನಿಗೆ ಯಾವ ನಿಯಮಗಳ ಅನ್ವಯ ಪರಿಹಾರ ನೀಡಲಾಗುವುದು; (ಸಮೀಕ್ಷೆಯ ವರದಿಯನ್ನು ನೀಡುವುದು) | ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿರುವ ಕಾಫಿ ಮಂಡಳಿಯು, ತೋಟಗಾರಿಕೆ ಇಲಾಖೆಯೊಂದಿಗೆ ಸಮನ್ವಯದಲ್ಲಿ ಹಾಗೂ ಕಂದಾಯ ಇಲಾಖೆಯ ಸಹಕಾರದೊಂದಿಗೆ ಬೆಳೆಹಾನಿಯಾದ ಪ್ರದೇಶಗಳಲ್ಲಿ ಬೆಳೆ ಹಾನಿಯ ಪ್ರತಿ ತಾಕು (ಪ್ಲಾಟ್) ಗಳಿಗೆ ವೈಜ್ಞಾನಿಕ ಮೌಲ್ಯಮಾಪನ ನಡೆಸಲಾಗಿದೆ. ವರದಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಕೇಂದ್ರ ಗೃಹ ಮಂತ್ರಾಲಯವು ದಿನಾಂಕ: 11.07.2023 ರಂದು ಹೊರಡಿಸಿದ ಮಾರ್ಗಸೂಚಿಗಳ ಮೂಲಕ ಪ್ರಕಟಿಸಿರುವ SDRF ಮತ್ತು NDRF ಸಹಾಯದ ಪರಿಷ್ಕೃತ ಅಂಶಗಳು ಮತ್ತು ಮಾನದಂಡಗಳ ಕ್ರಮ ಸಂಖ್ಯೆ: 05 ರ ಪ್ರಕಾರ, ಅಧಿಸೂಚಿತ ಪ್ರಕೃತಿ ವಿಕೋಪಗಳಿಂದ (**ಬೆಳೆ ನಷ್ಟ ಶೇ.33 ಅಥವಾ ಹೆಚ್ಚು ಇರುವಲ್ಲಿ**) ಬಾಧಿತ ರೈತರಿಗೆ ಕೃಷಿ ಬೆಳೆಗಳು, ಹಾಗೂ ತೋಟಗಾರಿಕೆ ಬೆಳೆಗಳಿಗೆ (ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ವರೆಗೆ) ಇನ್‌ಪುಟ್ ಸಬ್ಸಿಡಿಯ ರೂಪದಲ್ಲಿ ಕೆಳಕಂಡಂತೆ ಪರಿಹಾರ ಒದಗಿಸಲಾಗುತ್ತದೆ;<br><br>1. ಮಳೆಯಾಶ್ರಿತ ಪ್ರದೇಶಗಳಲ್ಲಿ ಹೆಕ್ಟೇರ್‌ಗೆ ರೂ.8,500/- (ಪ್ರತಿ ರೈತನಿಗೆ ಕನಿಷ್ಠ ರೂ.1,000/- ನೆರವಿಗೆ ಒಳಪಟ್ಟಿದ್ದು, ಬಿತ್ತಿದ ಪದೇಶಗಳಿಗೆ ಮಾತ್ರ ಸೀಮಿತ).<br>2. ನೀರಾವರಿ ಪ್ರದೇಶಗಳಲ್ಲಿ ಹೆಕ್ಟೇರ್‌ಗೆ ರೂ.17,000/- (ಪ್ರತಿ ರೈತನಿಗೆ ಕನಿಷ್ಠ ರೂ.2,000/- ನೆರವಿಗೆ ಒಳಪಟ್ಟಿದ್ದು, ಬಿತ್ತಿದ ಪ್ರದೇಶಗಳಿಗೆ ಮಾತ್ರ ಸೀಮಿತ).<br>3. ತೆಂಗು ಮತ್ತು ಅಡಿಕೆ ಸೇರಿದಂತೆ ಎಲ್ಲಾ ವಿಧದ ಬಹುವಾರ್ಷಿಕ ಬೆಳೆಗಳಿಗೆ ಹೆಕ್ಟೇರ್‌ಗೆ ರೂ.22,500/- (ಬಿತ್ತಿದ ಪ್ರದೇಶಗಳಿಗೆ ಮಾತ್ರ ಸೀಮಿತ). |

| | | |
|---|---|---|
| | | SDRF / NDRF ಅಡಿಯಲ್ಲಿ ಪ್ರಕೃತಿ ವಿಕೋಪಗಳ ನಂತರ ನೀಡಲಾಗುವ ಆರ್ಥಿಕ ಸಹಾಯವು ಪರಿಹಾರದ ಸ್ವರೂಪದಲ್ಲಿದ್ದು, ಸಂಭವಿಸಿದ ಅಥವಾ ಬೇಡಿಕೆಗೊಳಪಡಿಸಿದ ನಷ್ಟಕ್ಕೆ ಪರಿಹಾರಧನ ನೀಡಲಾಗುವುದಿಲ್ಲ.<br><br>ಅಧಿಸೂಚಿತ ಪ್ರಕೃತಿ ವಿಕೋಪಗಳ (ಪ್ರವಾಹಗಳು / ಭಾರೀ ಮಳೆ) ಕಾರಣದಿಂದ ಶೇ.33 ಕ್ಕಿಂತ ಹೆಚ್ಚು ಕಾಫಿ ಬೆಳೆ ಹಾನಿಗೆ ಸಂಬಂಧಿಸಿದ ಜಂಟಿ ಸಮೀಕ್ಷೆ ವರದಿ ಕಾಫಿ ಮಂಡಳಿ ಮತ್ತು ತೋಟಗಾರಿಕೆ ಇಲಾಖೆಯಿಂದ ಇದುವರೆವಿಗೂ ವರದಿ ಮಾಡಿರುವುದಿಲ್ಲ.<br><br>ಭಾರತ ಸರ್ಕಾರವು ಖರೀಫ್ 2016 ರಿಂದ ರಾಜ್ಯ ಸರ್ಕಾರಗಳ ಮೂಲಕ ಉತ್ಪಾದನೆ ಆಧಾರಿತ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಪ್ರಕೃತಿ ವಿಕೋಪಗಳು ಮತ್ತು ಪ್ರತಿಕೂಲ ಹವಾಮಾನ ಘಟನೆಗಳಿಂದ ಬೆಳೆ ನಷ್ಟ ಅಥವಾ ಹಾನಿಯನ್ನು ಅನುಭವಿಸುವ ರೈತರಿಗೆ ಆರ್ಥಿಕ ಬೆಂಬಲ ನೀಡುವುದು ಮತ್ತು ರೈತರ ಅದಾಯವನ್ನು ಸ್ಥಿರಗೊಳಿಸುವುದು ಇದರ ಉದ್ದೇಶವಾಗಿದೆ. ಬಿತ್ತನೆಯ ಪೂರ್ವದಿಂದ ಕೊಯ್ಲು ನಂತರದ ನಷ್ಟಗಳವರೆಗೆ ಸಮಗ್ರ ಅಪಾಯ ಕವಚವನ್ನು ಈ ಯೋಜನೆಗಳ ಅಡಿಯಲ್ಲಿ ವಿಮೆ ಪಡೆದ ರೈತರಿಗೆ ಒದಗಿಸಲಾಗುತ್ತದೆ. ಅದರಂತೆ, ವೈಜ್ಞಾನಿಕ ಸಮೀಕ್ಷೆ ನಡೆಸಿದ ನಂತರ ಕಾಫಿ ಬೆಳೆ ನಷ್ಟಕ್ಕೆ ಸಂಬಂಧಿಸಿದ ಪರಿಹಾರಕ್ಕಾಗಿ ಕಾಫಿ ಮಂಡಳಿ ಮತ್ತು ತೋಟಗಾರಿಕೆ ಇಲಾಖೆಯು ಸಂಬಂಧಿಸಿದ ವಿಮಾ ಕಂಪನಿಗಳೊಂದಿಗೆ ವಿಷಯವನ್ನು ಪ್ರಸ್ತಾಪಿಸಬಹುದು. |

| | | |
|---|---|---|
| ಇ) | ಈ ಸಮೀಕ್ಷೆಯನ್ನು ಸ್ಥಳೀಯವಾಗಿ ವಿರೋಧಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು; ಮರು ಸಮೀಕ್ಷೆ ಮಾಡಲು ಇಲಾಖೆಯು ಕ್ರಮ ಕೈಗೊಳ್ಳುವುದೇ; | ಸದರಿ ಸಮೀಕ್ಷಾ ವರದಿಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. |
| ಈ) | ಈ ಸಮೀಕ್ಷೆಯ ಅನ್ವಯ ಬಿಡುಗಡೆ ಮಾಡಲಾದ ಪರಿಹಾರ ಮೊತ್ತ ಎಷ್ಟು; ಬಿಡುಗಡೆ ಮಾಡಬೇಕಾಗಿರುವ ಮೊತ್ತ ಎಷ್ಟು? (ಸಂತ್ರಸ್ತರ ಮಾಹಿತಿಯೊಂದಿಗೆ ಒದಗಿಸಿ.) | ಜಂಟಿ ಸಮೀಕ್ಷೆಯ ಪ್ರಕಾರ ಯಾವುದೇ ತೋಟಗಾರಿಕೆ ಬೆಳೆಗಳು ಶೇ. 33 ಕ್ಕಿಂತ ಹೆಚ್ಚು ಹಾನಿಯಾಗಿರುವುದಿಲ್ಲವೆಂದು ತೋಟಗಾರಿಕೆ ಉಪನಿರ್ದೇಶಕರು, ಮಡಿಕೇರಿ, ಕೊಡಗು ಜಿಲ್ಲೆ ರವರು ಮಾಹಿತಿ ನೀಡಿರುತ್ತಾರೆ.<br><br>ಜಂಟಿ ಸಮೀಕ್ಷೆಯ ಪ್ರಕಾರ ಭತ್ತ 4.08 ಹೆಕ್ಟೇರ್ ಮತ್ತು 0.8 ಹೆಕ್ಟೇರ್ ಮೆಕ್ಕೆಜೋಳ ಸೇರಿ ಒಟ್ಟು 4.88 ಹೆಕ್ಟೇರ್ ಕೃಷಿ ಬೆಳೆ ಹಾನಿಗೆ ಒಟ್ಟು ರೂ.62,000/- ಗಳನ್ನು 20 ಜನ ಬಾಧಿತ ರೈತರ ಖಾತೆಗಳಿಗೆ ಪಾವತಿಸಲಾಗಿರುತ್ತದೆ. |

ಸಂಖ್ಯೆ: ಇ-ಕಂಇ 617 ಟಿಎನ್ಆರ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ-1

ಒಟ್ಟು ಗುರುತಿನ (ಫ್ರೂಟ್ಸ್ ಐಡಿ) ಸಂಖ್ಯೆ :- 150 (1521)

## ಕೊಡಗು ಜಿಲ್ಲೆ.

## 2025-26ನೇ ಸಾಲಿನ ಬೆಳೆ ಹಾನಿ ಸಮೀಕ್ಷೆ ವರದಿ

ಕೊಡಗು ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಪ್ರಕೃತಿ ವಿಕೋಪ/ಹವಮಾನ ವೈಪರೀತ್ಯ ಮುಂಗಾರು ಮಳೆಯಿಂದಾಗಿ ಹಾನಿಯಾಗಿರುವ ಬೆಳೆಗಳ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಆದೇಶ ಸಂ: ಕೃಇ/21/2025-26 ದಿನಾಂಕ: 02.09.2025 ರಂದು ತಂಡ ರಚಿಸಿ ಆದೇಶಿಸಲಾದಂತೆ, ಜಂಟಿ ಸಮೀಕ್ಷೆ ನಡೆಸಿ, ಈ ಕೆಳಕಂಡಂತೆ ವರದಿ ಸಲ್ಲಿಸಿದೆ.

ಮುಂದುವರೆದು, ಪ್ರಸಕ್ತ ಸಾಲಿನ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆಯಾಗಿರುತ್ತದೆ.

| Estimated Crop Loss due to Heavy Rain fall ( Heavy Wind, Lightening, Flood) in Kodagu | | | | |
|---|---|---|---|---|
| Taluk | Name of the Crop | Actual Area ( Ha) | Estimated Total Crop loss Area > 33 % (Ha) | Amount Recommended for >33% Crop Loss (Rs. In Lakhs) |
| Horticulture Crop Loss | | | | |
| Madikeri | Nil | 0 | 0 | 0 |
| Somwarpet | Nil | 0 | 0 | 0 |
| Virajpet | Nil | 0 | 0 | 0 |
| Ponnampet | Nil | 0 | 0 | 0 |
| Kushalnagara | Nil | 0 | 0 | 0 |
| **Total** | | **0** | **0** | **0** |
| Agriculture Crop Loss | | | | |
| Madikeri | Paddy | 4.08 | 4.08 | 34680.00 |
| Somwarpet | Nil | 0 | 0 | 0.00 |
| Virajpet | Nil | 0 | 0 | 0.00 |
| Ponnampet | Nil | 0 | 0 | 0.00 |
| Kushalnagara | Maize | 0.8 | 0.8 | 6800.00 |
| **Total** | | **4.88** | **4.88** | **41480** |

**ಷರಾ:** ಜಂಟಿ ಸಮೀಕ್ಷೆ ನಡೆಸಲಾದಂತೆ, ಶೇ. 33ಕ್ಕಿಂತ ಅಧಿಕ ಪ್ರಮಾಣದಲಿ ಕಾಫಿ ಬೆಳೆ ಹಾನಿಯಾಗಿರುವ ಕುರಿತು ಕಾಫಿ ಮಂಡಳಿಯಿಂದ ಯಾವುದೇ ವರದಿ ಸಲ್ಲಿಸಿರುವುದಿಲ್ಲ.

ದಿನಾಂಕ: 05.11.2025

ಜಂಟಿ ಕೃಷಿ ನಿರ್ದೇಶಕರು
ಮಡಿಕೇರಿ, ಕೊಡಗು ಜಿಲ್ಲೆ

ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್, ಮಡಿಕೇರಿ, ...

ತಹಸೀಲ್ದಾರ್
ವಿರಾಜಪೇಟೆ ತಾಲ್ಲೂಕು.

ತಹಸೀಲ್ದಾರ್
ಕುಶಾಲನಗರ ತಾಲ್ಲೂಕು

ತಹಸೀಲ್ದಾರ್
ಪೊನ್ನಂಪೇಟೆ ತಾಲ್ಲೂಕು

ತಹಸೀಲ್ದಾರ್
[illegible]

ತಹಸೀಲ್ದಾರ್
ಮಡಿಕೇರಿ ತಾಲ್ಲೂಕು.

Scanned with OKEN Scanner